
ಈವರೆಗೆ ಹೆಣ್ಣಿನ ಕುರಿತು ಬರೆದಿರುವ ಅಷ್ಟೂ ಪದ್ಯಗಳನ್ನು ಆಯ್ದು 'ಆಮೆ ಎವರ್ರೈತೆ ಮಾತ್ರಂ' ಎಂಬ ಪ್ರತ್ಯೇಕ ಸಂಕಲನವನ್ನೇ ರೂಪಿಸಲಾಗಿದೆ.

'ನಾನೆಂದೂ ಇತರರನ್ನು ಸಂತುಷ್ಟಪಡಿಸಲೋ, ಸಂಪ್ರೀತಗೊಳಿಸಲೋ ಅಥವಾ ಅವರಿಂದ ಲಾಭ ಪಡೆಯಲೋ ಬರೆಯಲಿಲ್ಲ. ನನ್ನ ನಾನು ಸೀಳಿಕೊಂಡು, ದಹಿಸಿಕೊಂಡು, ಪುಟಕಿಟ್ಟು ಪರೀಕ್ಷಿಸಿಕೊಂಡು ಅದೊಂದು ಪವಿತ್ರ ಧರ್ಮವೆಂಬಂತೆ ಬರೆದೆ. ಸತ್ಯಾಂಶವಿಲ್ಲದೆ ಗಾಢವಾದ ನಂಬಿಕೆಯಿಲ್ಲದೆ ಒಂದಕ್ಷರವನ್ನೂ ಬರೆಯಲಿಲ್ಲ. ಕೆದಕಿ ಕೆದಕಿ, ಶೋಧಿಸಿ, ನನ್ನ ನಡೆಯಲಿ ಪರೀಕ್ಷೆಗೊಳಪಡಿಸಿ ಹೆಜ್ಜೆ ಮುಂದಿಟ್ಟಿರುವೆ. ಕಾವ್ಯ ನನಗೆ ಸರ್ವಸ್ವವಾಗಿದೆ. ನನ್ನ ಮುನ್ನಡೆಸುವ ಶಕ್ತಿಯಾಗಿದೆ. ನನ್ನ ಜೀವವಾಗಿದೆ. ನನ್ನ ಮನುಷ್ಯನನ್ನಾಗಿಸಿದ್ದೂ ಅದೇ! ನನ್ನೆಲ್ಲ ಭಯಗಳ ತೊಲಗಿಸಿ, ಭ್ರಮೆಗಳ ನಿವಾರಿಸಿ, ವರ್ಗಪ್ರಜ್ಞೆಯ ರೋಗದಿಂದ ರಕ್ಷಿಸಿ ಅಗ್ನಿಪುನೀತನನ್ನಾಗಿಸಿದೆ. ನನ್ನ ನಾನು ತಿಳಿದುಕೊಳ್ಳುವಂತೆ ಮಾಡಿದ್ದೇ ಅಲ್ಲದೆ ಲೋಕವನ್ನೂ ತಿಳಿದುಕೊಳ್ಳುವಂತೆ ಮಾಡಿದೆ. ನನಗೆ ಹೊಸ ಕಣ್ಣು ನೀಡಿದೆ, ಹೊಸ ಬದುಕು ನೀಡಿದೆ. ಅದು ನನ್ನ ಹೋರಾಟವೀರನನ್ನಾಗಿಸಿದೆ, ನನಗೆ ತಂದೆಯಾಗಿದೆ, ತಾಯಿಯಾಗಿದೆ, ಗೆಳೆಯನಾಗಿದೆ, ಕೈಗತ್ತಿಯಾಗಿದೆ, ಕೈದೀವಿಗೆಯಾಗಿದೆ, ಮೂರನೇ ಕಣ್ಣಾಗಿದೆ. ಕವಿತೆಯಿಲ್ಲದಿದ್ದರೆ ನಾನಿಲ್ಲ, ನಾನಿಲ್ಲದಿದ್ದರೆ ನನ್ನ ಕವಿತೆಯಿಲ್ಲ. ನನ್ನ ಬದುಕಿಗೆ ಪರ್ಯಾಯ ಪದ ನನ್ನ ಕವಿತೆ' ಎಂದು ಹೇಳಿಕೊಂಡಿರುವ ಅವರ ಕಾವ್ಯ ನಿಷ್ಠೆ ಅಚಲವಾದುದು. ಅವರು ಈವರೆಗೆ 25 ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕವಿತೆಯನ್ನಲ್ಲದೆ ಬೇರೇನನ್ನೂ ಬರೆಯದೆ ಏಕಪ್ರಕಾರವ್ರತಸ್ಥರಾಗಿ ಉಳಿದಿದ್ದಾರೆ.

★★★



ಶಿವಾರೆಡ್ಡಿ ಅವರೊಂದಿಗೆ ಲೇಖಕ ಚಿದಾನಂದ ಸಾಲಿ